# 1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು

# ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ

**OS**-233/2003 **PW**-3

**ದಿಃ 25.11.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ 10 ರಿಂದ 12ನೇ ಪ್ರತಿವಾದಿ ಪರ ಶ್ರೀ ಎಂ ಎಸ್ ಬಿ ವಕೀಲರಿಂದಃ**

ನನಗೆ ಒಂದು ದಾಖಲೆಯು ನೋಟರಿಯಾಗಬೇಕೆಂದರೆ ಯಾವೆಲ್ಲಾ ಕ್ರಮ ಅನುಸರಿಸಬೇಕೆಂಬ ಬಗ್ಗೆ ಮಾಹಿತಿ ಇರುತ್ತದೆ. ಸಾಕ್ಷಿಗೆ ನಿಪಿ 19 ನ್ನು ತೋರಿಸಿ ಅದರಲ್ಲಿ ತಮ್ಮ ಸಹಿ ಇದೆಯಾ ಎಂದರೆ ಸಾಕ್ಷಿಯು ದಾಖಲೆ ನೋಡಿ ಇಲ್ಲ ಎನ್ನುತ್ತಾರೆ. ತಾವು ಯಾವ ದಾಖಲೆಗೆ ಸಹಿ ಮಾಡಿರುತ್ತೀರಿ ಎಂದರೆ ಸಾಕ್ಷಿಯು ಮೊಕ್ತಿಯಾರ ಪತ್ರಕ್ಕೆ ಸಹಿ ಮಾಡಿದ್ದು ಯಾವ ನಾತೆಯಿಂದ ಸಹಿ ಮಾಡಿರುತ್ತೀರಿ ಎಂದರೆ ಸಾಕ್ಷಿಯು ಪಕ್ಷಗಾರರು ಮಾಡಿದ ಸಹಿಗಳನ್ನು ಗುರುತಿಸಿದ ಬಗ್ಗೆ ಸಹಿ ಮಾಡಿರುತ್ತೇನೆಂದು ನುಡಿಯುತ್ತಾರೆ. ಯಾವದೇ ಒಂದು ದಾಖಲೆಯು ನೋಟರಿ ಮುಂದೆ ನೋಟರಿಯಾದರೆ ಅದಕ್ಕೆ ಕ್ರಮ ಸಂಖ್ಯೆ ನೀಡಬೇಕೆಂದರೆ ಸಾಕ್ಷಿಯು ಸರಿ ಎಂದು ಅದನ್ನು ನೋಟರಿ ಮಾಡುವವರು ನೀಡಬೇಕು ಎನ್ನುತ್ತಾರೆ. ನಿಪಿ 21 ಮತ್ತು 22 ರಲ್ಲಿ ನೋಟರಿ ಕ್ರಮ ಸಂಖ್ಯೆ ಇಲ್ಲ ಎಂದರೆ ಸರಿ. ನೋಟರಿ ಕ್ರಮ ಸಂಖ್ಯೆಯನ್ನು ಬರೆಯುವ ಉದ್ದೇಶ ಸದರಿ ದಿನದಂದು ಬರೆದುಕೊಡುವ ವ್ಯಕ್ತಿಗಳು ನೋಟರಿ ಮುಂದೆ ಹಾಜರಿದ್ದರು ಹಾಗೂ ಸಹಿ ಮಾಡಿದರು ಎಂದು ತೋರಿಸಲು ನೀಡುತ್ತಾರೆಂದರೆ ಸರಿ. ನಾನು ನಿಪಿ 21 ಮತ್ತು 22 ರಲ್ಲಿ ತಾವು ಯಾರನ್ನು ಗುರುತಿಸಿದ ಬಗ್ಗೆ ಸಹಿ ಮಾಡಿರುತ್ತೀರಿ ಎಂದರೆ ಸಾಕ್ಷಿಯು ಇಬ್ಬರೂ ಪಕ್ಷಗಾರರನ್ನು ಗುರುತಿಸಿದ ಬಗ್ಗೆ ಮಾಡಿರುತ್ತೇನೆ ಎನ್ನುತ್ತಾರೆ. ತಾವು ಇಬ್ಬರೂ ಪಕ್ಷಗಾರರನ್ನು ಗುರುತಿಸಿ ಸಹಿ ಮಾಡಿದ ಬಗ್ಗೆ ನಿಖರವಾಗಿ ಉಲ್ಲೇಖ ಇಲ್ಲ ಎಂದರೆ ಸರಿ. ನಿಪಿ 21 ಮತ್ತು 22 ರಲ್ಲಿ ಸಿ ವಿ ರಟ್ಟಿಹಳ್ಳಿ ವಕೀಲರು ಹಾಜರು ಇದ್ದ ಬಗ್ಗೆ ಉಲ್ಲೇಖ ಇಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಆ ದಿನ ಅವರು ಹಾಜರಿದ್ದರು ಎನ್ನುತ್ತಾರೆ. ಯಾವ ದಾಖಲೆ ನೋಡಿ ಸಿ ವಿ ರಟ್ಟಿಹಳ್ಳಿ ವಕೀಲರು ಹಾಜರಿದ್ದರು ಎಂದು ತಮ್ಮ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುತ್ತೀರಿ ಎಂದರೆ ಸಾಕ್ಷಿಯು ದಾಖಲೆ ಯಾವದೂ ಇಲ್ಲ ಎನ್ನುತ್ತಾರೆ. ನಿಪಿ 21 ಮತ್ತು 22 ನ್ನು ನಾನು ತಯಾರಿಸಿರುವದಿಲ್ಲ. ತಾವು ಕೇವಲ ಪಕ್ಷಗಾರರನ್ನು ಗುರುತಿಸಿದ ಬಗ್ಗೆ ಮಾತ್ರ ಸಹಿ ಮಾಡಿರುವದಾಗಿ ತಿಳಿಸಿದ್ದು ಅದನ್ನು ಬಿಟ್ಟು ಆ ದಾಖಲೆಯಲ್ಲಿ ಏನೆಲ್ಲಾ ಬರೆದಿದೆ ಎಂಬ ಬಗ್ಗೆ ತಮಗೆ ಮಾಹಿತಿ ಇಲ್ಲ ಎಂದರೆ ಸರಿ. ತಮ್ಮ ಮುಖ್ಯ

ವಿಚಾರಣೆಯ ಪ್ರಮಾಣ ಪತ್ರದಲ್ಲಿ ಏನೆಲ್ಲಾ ಬರೆದಿದೆ ಎಂಬ ಬಗ್ಗೆ ತಮಗೆ ಗೊತ್ತಿಲ್ಲ ಎಂದರೆ ಸಾಕ್ಷಿಯು ನನಗೆ ನೆನಪಿಲ್ಲ ಎನ್ನುತ್ತಾರೆ. ಕಲ್ಯಾಣಶೆಟ್ಟರ ರವರಾ ಪರವಾಗಿ ಸಾಕ್ಷ್ಯ ನುಡಿಯಲು ಬಂದಿರುತ್ತೀರಿ ಎಂದರೆ ಸಾಕ್ಷಿಯು ಅವರ ಪರವಾಗಿ ಬಂದಿಲ್ಲ ಹಾಗೂ ಯಾರ ಪರವಾಗಿ ಬಂದಿದ್ದೀನಿ ಎಂಬ ಬಗ್ಗೆ ಗೊತ್ತಿಲ್ಲ. ಸಿ ವಿ ರಟ್ಟಿಹಳ್ಳಿ ರವರು ಆ ದಿನ ಹಾಜರಿರದಿದ್ದರೂ ಹಾಜರು ಇದ್ದರು ಎಂದು ಪಿ ಡಬ್ಲು 1 ರವರ ಹೇಳಿಕೆ ಮೇರೆಗೆ ತಾವು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಸಿ ವಿ ರಟ್ಟಿಹಳ್ಳಿ ವಕೀಲರು ಮದ್ಯಸ್ಥಗಾರರು ಆಗಿದ್ದರೆಂದು ತಮ್ಮ ಮುಖ್ಯ ವಿಚಾರಣೆಯಲ್ಲಿ ತಿಳಿಸಿದ್ದು ಆ ಬಗ್ಗೆ ಎಲ್ಲಿಯೂ ದಾಖಲೆಯಲ್ಲಿಪಿ ಉಲ್ಲೇಖ ಇಲ್ಲ. ತಾವು ಹೇಳುವ ಯಾವದೇ ದಾಖಲೆಯು ನೋಟರಿಯಾಗಿರುವದಿಲ್ಲ ಹಾಗೂ ಕಲ್ಯಾಣಶಲೆಟ್ಟರ ಹೇಳಿಕೆ ಮೇರೆಗೆ ಸುಳ್ಳು ಸಾಕ್ಷಿ ಹೇಳುತಿತದ್ದೀರಿ ಎಂದರೆ ಸರಿಯಲ್ಲ.

**(10 ರಿಂದ 12 ನೇ ಪ್ರತಿವಾದಿಯರು 13 ನೇ ಪ್ರತಿವಾದಿಯರ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಮುಂದುವರೆದ ಪಾಟೀ ಸವಾಲಾಗಿ ತಮ್ಮ ಪರವಾಗಿ ಅಳವಡಿಸಿಕೊಂರುತ್ತಾರೆ. )**

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

**1 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**